ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ದಿನಾಂಕ ೪ನೇ ಮಾರ್ಚ್ ೧೯೮೭ ಫಾಲ್ಗುಣ ೧೩, ಶಕ ೧೯೦೮

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಕರ್ನಾಟಕ ಗೃಹ ನಿರ್ಮಾಣ ಮಂಡಳಿಯವರಿಂದ ನಂಜನಗೂಡಿನಲ್ಲಿ ಮನೆಗಳ ನಿರ್ಮಾಣ

೭೫೯. ಶ್ರೀ ಡಿ. ಟಿ. ಜಯಂಕಮಾರ್ (ನಂಜನಗೂಡು).—ಮಾನ್ಯ ಗ್ರಾಮಾಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡಿನಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯವರಿಂದ ಕಟ್ಟಲಾಗುತ್ತಿರುವ ಮನೆಗಳ ಸಂಖ್ಯೆ ಎಷ್ಟು ?

ಆ) ಈ ಮನೆಗಳನ್ನು ಹಂಚಲು ಅರ್ಜಿಗಳನ್ನು ಕರೆಯಲಾಗಿದೆಯೇ ? ಹಾಗಿಲ್ಲದಿದ್ದಲ್ಲಿ ಯಾವಾಗ ಕರೆಯಲಾಗುವುದು ?

ಇ) ಒಟ್ಟು ನಿರ್ಮಾಣವಾಗುತ್ತಿರುವ ಮನೆಗಳಲ್ಲಿ ಹೆಚ್ಚು ಆದಾಯ ವರ್ಗ ಹಾಗೂ ಅಲ ಆದಾಯ ವರ್ಗದ ಮನೆಗಳೆಷ್ಟು ಪಂತ್ತು ಪ್ರತಿ ಮನೆಗೆ ಆಗುತ್ತಿರುವ ಅಂದಾಜು ವೆಚ್ಚ ವೆಷ್ಟು ?

ಈ) ಈ ಕಟ್ಟಡಗಳ ನಿರ್ಮಾಣ ಯಾವಾಗ ಪೂರ್ತಿಗೊಳ್ಳುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ಒಟ್ಟು ೧೪೬ ಮನೆಗಳು

ಆ) ೧೯೮೧ರಲ್ಲಿ ಈ ಮನೆಗಳ ಹಂಚಿಕೆಗೆ ಬೇಡಿಕೆ ಸಮೀಕ್ಷೆ (ಡಿಮ್ಯಾಂಡ್ ಸರ್ವೆ) ನಡೆಸಿ ಅರ್ಜಿಗಳನ್ನು ಕರೆಯಲಾಗಿತ್ತು.

೫)	ವರ್ಗ	ಸಂಖ್ಯೆ	ಅಂದಾಜು (ತಾತ್ಕಾಲಿಕ) (೧ ಮನೆಗೆ)
	ಮಧ್ಯಮ ವರ್ಗ ಗ್ರೂಪ್ ೧	೪೨	ರೂ ೪೯, ೪೫೦
	ಮಧ್ಯಮ ವರ್ಗ ಗ್ರೂಪ್ ೨	೧೯	ರೂ ೬೬,೩೦೦
	ಅಲ್ಪ ಆದಾಯ ವರ್ಗ	೪೪	ರೂ ೩೪,೬೫೦
	ಆರ್ಥಿಕ ಹಿಂದುಳಿದ ವರ್ಗ	೪೧	ರೂ ೨೩,೭೦೦

ಈ) ಡಿಸೆಂಬರ್ ೧೯೮೭ರ ಒಳಗೆ ಪೂರ್ತಿಗೊಳಿಸಲಾಗುವುದು.

ಶ್ರೀ ಡಿ. ಟಿ. ಜಯಂಕುಮಾರ್.— ಮಾನ್ಯ ಅಧ್ಯಕ್ಷರೇ, ಮನೆಗಳನ್ನು ಕೆ.ಹೆಚ್.ಬಿ. ಪತಿಯಿಂದ ಕಟ್ಟಿಸಿದ್ದಾರೆ. ಆದರೆ ಆ ಮನೆಗಳಲ್ಲಿ ವಾಸ ಮಾಡುವುದಕ್ಕೆ ಬಹಳ ಜನರು ಹಿಂದುಮುಂದು ನೋಡುತ್ತಿದ್ದಾರೆ. ಈ ಕಟ್ಟಡಗಳ ಗುಣಮಟ್ಟ ಸರಿಯಾಗಿರುವುದಿಲ್ಲ. ಮಾನ್ಯ ನಜೀರ್‌ಸಾಬ್‌ರವರು ಒಳ್ಳೆಯ ಹೆಸರನ್ನು ಗಳಿಸಿದ್ದಾರೆ, ಇವರು ಕೆ. ಹೆಚ್. ಬಿ. ಪತಿಯಿಂದ ಕಟ್ಟುವ ಕಟ್ಟಡಗಳ ಗುಣಮಟ್ಟವನ್ನು ಹೆಚ್ಚಿಸಲಿಕ್ಕೆ ಪ್ರಯತ್ನ ಮಾಡಬೇಕು. ಹಾಗೂ ಇವರ ಇಲಾಖೆಯಲ್ಲಿ ಇರುವ ಲ್ಯಾಂಡ್ ಆರ್ಮಿಗೆ ಕಟ್ಟಡಗಳನ್ನು ಕಟ್ಟುವುದಕ್ಕೆ ಏರ್ಪಾಡು ಮಾಡಿದರೆ ಒಳ್ಳೆಯದಾಗುತ್ತದೆ ದಯವಿಟ್ಟು, ಗುಣಮಟ್ಟ ಕಾಪಾಡಲಿಕ್ಕೆ ಹೆಚ್ಚು ಅಧ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಮಧ್ಯಮ ವರ್ಗ ೧, ಮಧ್ಯಮ ವರ್ಗ ೨, ಅಲ್ಪ ಆದಾಯ ವರ್ಗ, ಆರ್ಥಿಕ ಹಿಂದುಳಿದ ವರ್ಗ ಎಂದು ನಾಲು ಡಿವಿಷನ್ ಗಳಾಗಿ ಮಾಡಿ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದೀರಿ. ಆದೇ ರೀತಿ ಹೆಚ್ಚು ಆದಾಯ ಇರತಕ್ಕಂಥ ಜನರಿಗೂ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಅವಕಾಶ ಕೊಟ್ಟರೆ, ಸಾಕಷ್ಟು ಬೇಡಿಕೆ ಇದಕ್ಕೆ ಬರುತ್ತದೆ ಎಂದು ನಾನು ಭಾವಿಸುತ್ತೇನೆ. ಹೆಚ್ಚು ಆದಾಯದ ವರ್ಗಕ್ಕೆ ಮನೆಗಳನ್ನು ಕಟ್ಟುವಾಗ ಗುಣಮಟ್ಟ ಕಾಪಾಡುವುದಕ್ಕೆ ಹೆಚ್ಚು ಮುತುವರ್ಜಿ ವಹಿಸಬೇಕೆಂದು ಹೇಳುತ್ತೇನೆ,

ಶ್ರೀ ಅಬ್ದುಲ್ ನಜೀರ್‌ಸಾಬ್.—ಗುಣಮಟ್ಟ ಕಾಪಾಡುವ ಕೆಲಸವನ್ನು ಸಾಧ್ಯವಾದಷ್ಟು ಮಟ್ಟಿಗೆ ಕೈಗೊಳ್ಳುತ್ತೇನೆ. ಮಾನ್ಯ ಸಾರ್ವಜನಿಕರಾಗಲೀ, ಮಾನ್ಯ ಸದಸ್ಯರಾಗಲೀ ಎಸ್ಟಿಯಾದರೂ ಕಟ್ಟಡಗಳ ಗುಣಮಟ್ಟದ ಬಗ್ಗೆ ದೂರು ಕೊಟ್ಟಲ್ಲಿ ಕ್ರಮ ಕೈಗೊಳ್ಳುತ್ತೇನೆ. ಈಗಾಗಲೇ ಸರ್ಕಾರವು ಒಂದು ಆಜ್ಞೆಯನ್ನು ಮಾಡಿ ಶೇಕಡಾ ೧೦ ಪರ್‌ಸೆಂಟ್‌ನಷ್ಟು ಮನೆಗಳನ್ನು ಕಟ್ಟುವ ಕೆಲಸವನ್ನು ಲ್ಯಾಂಡ್ ಆರ್ಮಿಗೆ ಕೊಡಬೇಕೆಂದು ಆಜ್ಞೆ ಮಾಡಿದ್ದೇವೆ.ಹೆಚ್ಚು ಆದಾಯ ಉಳ್ಳವರಿಗೂ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳಿದ್ದಾರೆ. ಈಗ ಮಧ್ಯಮ ವರ್ಗದ ಜನಗಳಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮನೆಗಳನ್ನು ಇ.ಡಬ್ಲು.ಎಸ್ (ಎಕನಾಮಿಕಲಿ ವೀಕರ್ ಸೆಕ್ಷನ್) ಸ್ಕೀಮ್‌ನಲ್ಲಿ ಕಟ್ಟಿಸಿ ಕೊಡುತ್ತಿದ್ದೇವೆ. ಹೆಚ್ಚು ಆದಾಯ ಉಳ್ಳವರಿಗೆ ಮನೆಗಳನ್ನು ಕಟ್ಟುವ ಬಗ್ಗೆ ಅಗತ್ಯ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಕರ್ನಾಟಕ ಗೃಹ ಮಂಡಲಿಯಂ ಮನೆಗಳ ಹಂಚಿಕೆ ಬಗ್ಗೆ

೭೫೮. ಶ್ರೀ ಎಸ್. ಡಿ. ಜಯರಾಮ್ (ವಂಡ್ಯ).—ಮಾನ್ಯ ಗ್ರಾಮಾಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಗೃಹ ಮಂಡಳಿಯವರು ೧೯೮೪-೮೫ನೇ ಹಾಗೂ ೮೬ರವರೆಗೆ ಹಂಚಿದ ಮನೆಗಳ ಸಂಖ್ಯೆ ಎಷ್ಟು ?